## ಮಹಿಳೆ ಮೇಲಿನ ದೌರ್ಜನ್ಯ ಮತ್ತು ಕಾನೂನು

**ಸಾರ್ವಜನಿಕ ಸ್ಥಳಗಳಲ್ಲಿ**



**ಅತ್ಯಾಚಾರ**
**ಲೈಂಗಿಕ ಕಿರುಕುಳ**
**ಸೈಬರ್ ಕ್ರೈಂ**

ಎಲ್ಲವೂ ಐ.ಪಿ.ಸಿ ಅಡಿಯಲ್ಲಿ ಅಪರಾಧಗಳು



**ಉದ್ಯೋಗದ ಸ್ಥಳಗಳಲ್ಲಿ**



**ಲೈಂಗಿಕ ಕಿರುಕುಳ**
(ಉದ್ಯೋಗದ ಸ್ಥಳದಲ್ಲಿ ನಡೆಯುವ ಲೈಂಗಿಕ ಕಿರುಕುಳದಿಂದ ಮಹಿಳೆಯರನ್ನು ರಕ್ಷಿಸುವ ಕಾಯಿದೆ, 2013)

ಗರ್ಭಿಣಿ ಹಿತ ಕಾಪಾಡುವ ಕಾಯಿದೆ
(ಮೆಟರ್ನಿಟಿ ಬೆನಿಫಿಟ್ ಆಕ್ಟ್)

ಫ್ಯಾಕ್ಟರೀ ಕಾಯಿದೆ (ಮಹಿಳೆಯರನ್ನು ಸಂಜೆ 7 ಗಂಟೆಯ ನಂತರ ಕೆಲಸಕ್ಕೆ ಉಳಿಸಿಕೊಂಡರೆ, ಅವರನ್ನು ಸುರಕ್ಷಿತವಾಗಿ ಮನೆ ತಲುಪಿಸುವ ಜವಾಬ್ದಾರಿ ಉದ್ಯೋಗದ ಮಾಲೀಕನದ್ದು

**ಕುಟುಂಬದಲ್ಲಿ**



ಐ.ಪಿ.ಸಿ. ಸೆ. 498ಎ
(ಕ್ರಿಮಿನಲ್ ಕಾನೂನು)

**ಕೌಟುಂಬಿಕ ದೌರ್ಜನ್ಯ ತಡೆಗಟ್ಟುವ ಕಾಯಿದೆ,** 2005
(ಸಿವಿಲ್ ಕಾನೂನು)

ವಿಶೇಷ ವಿವಾಹ ಕಾಯಿದೆ
(ಯಾವ ಧರ್ಮ, ಜಾತಿಯವರನ್ನೂ ತಮ್ಮ ಆಯ್ಕೆಯಂತೆ ಮದುವೆಯಾಗಬಹುದು. ಗಂಡನಿಂದ ಕೌಟುಂಬಿಕ ಹಿಂಸೆಗೆ ಒಳಗಾದಾಗ ವಿಚ್ಛೇದನ ಪಡೆಯಬಹುದು)



ಕಾನೂನನ್ನು ಜಾರಿಮಾಡಲಾಯಿತು. ಈ ಮೂಲಕ, ಯಾವುದೇ ರೀತಿಯ ‘ಕುಟುಂಬ’ದಲ್ಲಿ, ಯಾವುದೇ ರೀತಿಯ ದೌರ್ಜನ್ಯವಾದರೆ, ಅಂಥ ಹಿಂಸೆಗೆ ಒಳಗಾದ ಮಹಿಳೆ ನ್ಯಾಯಾಲಯದ ಆದೇಶದ ಮೇರೆಗೆ ರಕ್ಷಣೆ ಪಡೆಯಬಹುದು ಎನ್ನುವುದನ್ನ ಕಾನೂನು ಮೊದಲ ಬಾರಿಗೆ ಹೇಳಿತು. ಈ ಕಾನೂನಿನ ಮೂಲಕ ಯಾವುದೇ ಬಗೆಯ ‘ಹಿಂಸೆಮುಕ್ತ ಕುಟುಂಬ’ ಮಹಿಳೆಯ ಹಕ್ಕಾಯಿತು.

ಹಿಂಸೆ, ದೌರ್ಜನ್ಯಕ್ಕೆ ಒಳಗಾದ ಮಹಿಳೆಗೆ ದೂರು ಎಲ್ಲಿ ನೀಡಬೇಕೆಂಬ ಸಮಸ್ಯೆ, ಈ ಮನೆಯಿಂದ ಹೊರ ಹೋದರೆ ಎಲ್ಲಿ ಉಳಿದುಕೊಳ್ಳುವುದು ಎನ್ನುವ ಸಮಸ್ಯೆಗಳಿರುವುದರಿಂದ ರಕ್ಷಣಾ ಅಧಿಕಾರಿಗಳು (ಪ್ರೊಟೆಕ್ಷನ್ ಆಫೀಸರ್), ಸಾಂತ್ವನ ಕೇಂದ್ರಗಳು (ಸರ್ವೀಸ್ ಪ್ರೊವೈಡರ್) ಸಂತ್ರಸ್ತ ಮಹಿಳೆಗೆ ಸಹಾಯ ಒದಗಿಸಬೇಕೆಂಬ ನಿಯಮಗಳನ್ನೂ ಈ ಕಾನೂನು ರೂಪಿಸಿದೆ. ಈ ಕಾಯಿದೆಯನ್ವಯ, ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆ ರಕ್ಷಣಾ ಅಧಿಕಾರಿಗಳ ಬಳಿ, ಅಥವಾ ಸಾಂತ್ವನ ಕೇಂದ್ರ, ಅಥವಾ ಪೊಲೀಸ್ ಠಾಣೆ, ಇಲ್ಲವೇ ಕೋರ್ಟಿಗೇ ನೇರವಾಗಿ ದೂರು ದಾಖಲಿಸಿ ರಕ್ಷಣಾ ಆದೇಶ ಬೇಕೆಂದು ಪ್ರಕರಣ ದಾಖಲಿಸಬಹುದು. ಹೊಡೆಯುವ ಗಂಡ, ಸಂಗಾತಿ ಮನೆಗೆ ಬರಬಾರದೆಂಬ ಆದೇಶ, ಬೇರೆ ಮನೆ ಮಾಡಿಕೊಡಬೇಕೆಂಬ ಆದೇಶ, ಮಾಡಿದ ಹಿಂಸೆಗಳಿಗೆ ಪರಿಹಾರ ಧನ ಕೊಡಬೇಕು ಎಂದೋ ಕೇಳುವ ಅವಕಾಶ ಕಾನೂನಿನಲ್ಲಿ ಇದೆ.

ಈ ಮೂಲಕ ಕಾನೂನಿನ ಉದ್ದೇಶ ಎಷ್ಟೇ ಸುಂದರವೆನಿಸಿದರೂ, ವಾಸ್ತವದಲ್ಲಿ ಬಹಳಾರು ನ್ಯೂನತೆಗಳಿದ್ದು, ಈ ವ್ಯವಸ್ಥೆ ಸರಿಯಾಗಿ ಕೆಲಸ ಮಾಡದೆ, ಹಲವು ಸವಾಲುಗಳನ್ನು ಎದುರಿಸುತ್ತದೆ. ಈಗಲೂ ದೌರ್ಜನ್ಯ ಹಿಂಸೆಗಳಿಗೆ ತುತ್ತಾಗುವ ಹೆಣ್ಣುಮಕ್ಕಳಿಗೆ ತುರ್ತಾಗಿ ರಕ್ಷಣೆ, ಸಾಂತ್ವನ ಸಿಗುವುದಿಲ್ಲ. ನ್ಯಾಯಾಲಯಗಳಿಗೆ ಹೋಗುವ ಪ್ರಕರಣಗಳಲ್ಲಿ ರಕ್ಷಣಾ ಆದೇಶ ಸಿಗುವುದಕ್ಕೇ ತಿಂಗಳುಗಳು, ವರ್ಷಗಳು ಹಿಡಿದು ಕಾನೂನಿನ ಉದ್ದೇಶವೇ ನಿರರ್ಥಕವಾಗುವ ಸಂದರ್ಭಗಳೇ ಹೆಚ್ಚು.

### ಉದ್ಯೋಗದ ಸ್ಥಳದಲ್ಲಿ ಕಿರುಕುಳ

ಇತ್ತೀಚೆಗೆ ಜಾರಿಯಾದ ಇನ್ನೊಂದು ಕಾನೂನು ಮಹಿಳೆಯರನ್ನು ಅವರ ಉದ್ಯೋಗದ ಜಾಗಗಳಲ್ಲಿ ಲೈಂಗಿಕ ಕಿರುಕುಳದಿಂದ ರಕ್ಷಿಸುವ ಬಗ್ಗೆ ಇದೆ.

ನಮ್ಮ ಮನ– ಮನೆಗಳಲ್ಲಿ ಬೇರೂರಿರುವ ಪೂರ್ವಗ್ರಹಗಳು, ತಾರತಮ್ಯಗಳೇ ನಮ್ಮ ಆಲೋಚನೆ, ನಡತೆ, ಆಯ್ಕೆಗಳನ್ನು ನಿರ್ದೇಶಿಸುತ್ತದೆ. ಹಾಗೆಯೇ ಉದ್ಯೋಗದ ಸ್ಥಳಗಳಲ್ಲಿ ಮಹಿಳೆಯರಿಗೆ ಸಿಗುವ ಅವಕಾಶಗಳು, ಸಂಬಳ– ಭತ್ಯೆಗಳು, ನಡೆಸಿಕೊಳ್ಳುವ ರೀತಿ – ಎಲ್ಲವುಗಳನ್ನೂ ನಮ್ಮ ಪೂರ್ವಗ್ರಹಗಳು ಪ್ರಭಾವಿಸುತ್ತಿರುತ್ತವೆ.

ಕುಟುಂಬದೊಳಗೆ, ಸಾರ್ವಜನಿಕ



